ಭಾವಿಗಳು ಆಗಿಲ್ಲ, ಆದರೆ ಇದರ ಬಗ್ಗೆ ಅಧಿಕಾರಿಗಳು ನಿಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ ಆ ವಿಷಯದ ಬಗ್ಗೆ ಸರಿಯಾದ ಮಾಹಿತಿಯನ್ನು ಸಂಗ್ರಹಣೆ ಮಾಡಿ ತಪ್ಪು ಮಾಹಿತಿಯನ್ನು ಕೊಟ್ಟಿರುವ ಅಧಿಕಾರಿಯ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಮತ್ತು ಒಂದೊಂದು ಗ್ರಾಮದಲ್ಲಿ ಒಂದೊಂದು ಭಾವಿಯನ್ನು ತೆಗೆಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ನಮ್ಮ ಪ್ರಶ್ನೆಯಾಗಿದೆ

ಶ್ರೀ ಕೆ. ಪ್ರಭಾಕರ್.—ಕೂಲಂಕಷವಾಗಿ ಪರಿಶೀಲನೆ ಮಾಡಿ ಸರಿ ಮಾಡುತ್ತೇನೆ. ಒಂದು ವೇಳೆ ಅಲ್ಲಿ ಮಾಹಿತಿಯನ್ನು ಸಂಗ್ರಹಿಸಲು ಮಿದ್ದಾಗಿ ಪರಿಶೀಲಿಸುವ ಅವಶ್ಯಕತೆ ಬಿದ್ದಲ್ಲಿ ಮಿದ್ದಾಗಿ ಅದನ್ನು ಪರಿಶೀಲನೆ ಮಾಡುತ್ತೇನೆ.

Borewells in Chikkodi Assembly Constituency

845 SRI P. P. HEGRE (Chikkodi).—Will the Minister for Rural Development and Panchayat Raj be pleased to state.—

(a) the places and the number of borewells dug in Chikkodi Assembly Constituency during 1976-77 and 1977-78 ;

(b) out of those the number of successful borewells ;

(c) whether all those borewells have been fitted with pumpsets ;

(d) out of those, the number of pumpsets which have gone out of order ;

(e) whether Government has made any arrangement to fit the pumpsets to these borewells which have not been fitted with pumpsets so far and also to replace the pumpset which have gone out of order ?

SRI K. PRABHAKAR. (Minister for Rural and Development Panchayat Raj).—

(a) —	1976-77	1977-78	Total
Borewells dug :	1	36	37

For details Statement is appended.

(b) —	1976-77	1977-78	Total
	1	30	31

(c) 23 borewells have been fitted with hand pumps and one borewell fitted with power pump. (24 pump sets).

(d) 7

(e) Yes

ANNEXURE

Sl No.	Name of the village and Taluk	Number of borewells sunk	Number of borewells successful	No. of borewells fitted with hand pumps/ power pumps	No of Handpumps gone out of order
		1976-77			
1.	Naslapur Raibhag Taluk ...	1	1	1	...
	Total ...	1	1	1	...
		1977-78			
1.	Chandur, Chikodi Taluk ...	2	2	2	1
2.	Yadur Chikodi Taluk	3	2	1	...
3.	Ingali do ...	2	1	...	...
4.	Kadapur do ...	2	2	2	...
5.	Kerur do ...	4	3	3	...
6.	Chinchani do ...	2	1	...	...
7.	Jodakurli do ...	2	2	1	...
8.	Taranhalli do ...	1	1	1	...
9.	Itanal do ...	2	1	1	...
10.	Kabbur do ...	3	3	3	1
11.	Donawadi do ...	2	2	2	1
12.	Mugali do ...	2	1	1	...
13.	Wadral do ...	1	1	...	...
14.	Benchali do ...	1	1	1	...
15.	Mazalatti do ...	1	1	1	1
16.	Kargaon do ...	3	3	2	1
17.	Hanchinal K.K., do ...	1	1	1	...
18.	Vijayanagar do ...	1	1	1	...
19.	Mantur do ...	1	1	...	...
	Total ...	36	30	23	7
	Grand Total ...	37	31	24	7

ಶ್ರೀ ಪಿ. ಪಿ. ಹೆಗಡೆ.—ಸ್ವಾಮಿ ೧೯೭೮-೭೯ ರ ಸಾಲಿನಲ್ಲಿ ತೋಡಿದ ಭಾವಿಗಳ ಸಂಖ್ಯೆ ಎಷ್ಟೆಂದು ಹೇಳುತ್ತೀರಾ ?

† **ಶ್ರೀ ಕೆ. ಪ್ರಭಾಕರ್.**—ಆ ಮಾಹಿತಿ ಇಲ್ಲಿ ಇಲ್ಲ.

ಶ್ರೀ ಪಿ. ಪಿ. ಹೆಗಡೆ.—ಮಾನ್ಯ ಮಂತ್ರಿಗಳವರೇ ಕೊಟ್ಟ ಮಾಹಿತಿ ಪ್ರಕಾರ ಒಂದು ಕಡೆ ೭ ಪಂಪ್ ಸೆಟ್‌ಗಳು ಕೆಟ್ಟು ಹೋಗಿವೆಂದು ಹೇಳಿದ್ದಾರೆ. ಇನ್ನು ೭ ಬೋರ್ ವೆಲ್‌ಗಳಿಗೆ ಇದೂವರೆಗೂ ಪಂಪ್ ಸೆಟ್ಟೇ ಹಾಕಿಲ್ಲ ಅಂದರೆ ಅಲ್ಲಿಗೆ ಟೋಟಲ್ ೧೪ ಬೋರ್ ವೆಲ್‌ಗಳು ಆವ ಹಾಗ ಆಯಿತು. ೧೯೭೭ ರಲ್ಲಿ ತೋಡಲಾದ ಕೊಳವೆ ಭಾವಿಗಳ ಸಂಖ್ಯೆ ಏನೋ ಬಹಳ ದೊಡ್ಡದು ಇದೆ. ಆದರೆ ತಾವು ಏನೋ ಬೋರ್ ವೆಲ್‌ಗಳನ್ನು ತೊಡಿಸುತ್ತೀರಿ, ಅದಕ್ಕೆ ಪಂಪ್‌ಸೆಟ್‌ಗಳನ್ನು ಇಲ್ಲಿಯವರೆಗೆ ಕೂಡ್ರಿಸಿಲ್ಲ ಆದಕ್ಕೆ ಹ್ಯಾಂಡ್ ಪಂಪ್‌ನ್ನೂ ಇಲ್ಲ ಎಲೆಕ್ಟ್ರಿಸಿಟಿ ಪಂಪ್‌ನ್ನೂ ಅಳವಡಿಸಿಲ್ಲ ಯಾವಾಗ ಕೊಡುತ್ತೀರಿ ಎಂಬುದನ್ನು ಹೇಳುವುದಕ್ಕೆ ಆಗುತ್ತದೆಯೇ ಸ್ವಾಮಿ ?

ಶ್ರೀ ಕೆ. ಪ್ರಭಾಕರ್.—ಭಾವಿಗಳನ್ನು ತೆಗೆಯುವ ಉದ್ದೇಶವೇ ಆದಕ್ಕೆ ಪಂಪ್‌ಸೆಟ್‌ಗಳನ್ನು ಜೋಡಿಸಿ ಜನಗಳಿಗೆ ನೀರಿನ ಉಪಯೋಗ ಮಾಡಿಕೊಡುವುದೆಂದೆ. ಆದರೆ ಒಂದೊಂದು ಸಲ ಪಂಪ್‌ಗಳಿಗೆ ಇಂಡೆಂಟ್ ಮಾಡಿದ್ದು ಸೂಕ್ತ ಕಾಲಕ್ಕೆ ಬಾರದೇ ಹೋಗಿರಬಹುದು ಮತ್ತು ರಿಪೇರಿ ಮಾಡಿಸ ಬೇಕಾಗಿರತಕ್ಕವುಗಳನ್ನು ಸಹ ಆದಷ್ಟು ಬೇಗ ಅವುಗಳನ್ನು ಮಾಡಿಸಿ ಕೊಡುತ್ತೇನೆ.

ಶ್ರೀ ಪಿ. ಪಿ. ಹೆಗಡೆ.—ಸ್ವಾಮಿ, ಗ್ರಾಮಾಂತರ ಪ್ರದೇಶಗಳಲ್ಲಿ ಹ್ಯಾಂಡ್ ಪಂಪ್‌ಗಳು ಕೆಟ್ಟು ಹೋಗಿವೆ, ಅಲ್ಲಿ ನೀರಿನ ಅವಶ್ಯಕತೆ ತುಂಬಾ ಇದೆ ಇವತ್ತು ಸೈನ್ಸ್ ಟೆಕ್ನಾಲಜಿ ಇಷ್ಟು ಮುಂದುವರೆದಿರುವಾಗ ಒಂದು ಹ್ಯಾಂಡ್ ಪಂಪ್‌ನ್ನು ಓಪಗಿಸುವುದಕ್ಕೆ ಏನು ತೊಂದರೆ ಇದೆ ? ನನ್ನ ತಾಲ್ಲೂಕಿನಲ್ಲಿ ನೋಡುವುದಾದರೆ ೪೦ ಪಂಪ್ ಸೆಟ್‌ಗಳು ಇವೆ ಅವುಗಳೆಲ್ಲಾ ಕೆಟ್ಟು ಹೋಗಿವೆ ಆದರಲ್ಲೂ ವಿಶೇಷವಾಗಿ ಜೋಡಕಾರ್ಲೆ ಅಂತ ಒಂದು ಹಳ್ಳಿ ಇದೆ. ಅಲ್ಲಿ ಎರಡು ವರ್ಷವಾಗಿ ಹೋಯಿತು ಬೋರ್ ವೆಲ್ ತೆಗೆಸಿ ಇಲ್ಲಿಯವರೆಗೆ ಪಂಪ್ ಸೆಟ್‌ನ್ನು ಹಾಕಿ ಕೊಟ್ಟಿಲ್ಲ. ಆದು ಹರಿಜನರ ಕಾಲೋನಿ ಅಲ್ಲಿಯ ಅಧಿಕಾರಿಗಳನ್ನು ಕೇಳಿದರೆ ಹ್ಯಾಂಡ್ ಪಂಪ್‌ಗಳು ಬಂದಿಲ್ಲ ಏನು ಮಾಡುವೇಕು. ಆಂತ ಹೇಳುತ್ತಾರೆ ಹರಿಜನ ಕೇರಿಗಳಿಗೆ ಶಡವಾಗಿ ಬೇಕಾದರೆ ಕೊಡಬಹುದು ಅಂತ ಏನಾದರೂ ಆಜ್ಞೆ ಇದೆಯೇ ?

ಶ್ರೀ ಕೆ. ಪ್ರಭಾಕರ್.—ಅಂಥಾ ಆದೇಶವೇನೂ ಇಲ್ಲ. ತಡ ಮಾಡುವೇಕು ಎನ್ನುವ ಉದ್ದೇಶವೇನೂ ಇರುವುದಿಲ್ಲ. ಹರಿಜನರ ಕಾಲೋನಿ, ಲಂಬಾಣಿಯರು ವಾಸಿಸುವ ಸ್ಥಳಗಳಲ್ಲಿ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಅಲ್ಲಿ ಪಂಪ್ ಸೆಟ್‌ಗಳನ್ನು ಹಾಕಿ ಕೊಡಬೇಕು ಎನ್ನುವುದರ ಬಗ್ಗೆ ಸರ್ಕಾರದ ಆದೇಶವಿದೆ ತಾವು ವರ್ಷಾನುಗಟ್ಟಲೆಯಾದರೂ ಹೇಳಿಲ್ಲವೆಂದು ಹೇಳುತ್ತಿದ್ದೀರಿ ಆದಕ್ಕೆ ಕೂಡಲೇ ಅದನ್ನು ಪತ್ತೆ ಹಚ್ಚಿ ಅಲ್ಲಿಗೆ ಪಂಪ್ ಸೆಟ್‌ನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ. ಪಿ. ಹೆಗಡೆ.—ಮಾನ್ಯ ಮಂತ್ರಿಗಳವರು ವಚನ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳವರು ಹೇಳುವುದು ಬೇರೆ ಆದರೆ ಅಧಿಕಾರಿಗಳು ಅಲ್ಲಿ ವರ್ತನೆ ಮಾಡುವುದೇ ಬೇರೆ. ಇದರ ಬಗ್ಗೆ ನನಗೆ ಸರ್ಕಾರಿ ಅಧಿಕಾರಿಗಳು ಉತ್ತರ ಕೊಟ್ಟಿದ್ದಾರೆ. ನಿಮ್ಮ ಸರ್ಕಾರಿ ಆಜ್ಞೆ ಇದೆ ಒಂದು ಗ್ರಾಮಕ್ಕೆ ಒಂದೇ ಬೋರ್ ವೆಲ್ ಅಂತ ಆಜ್ಞೆ ಇದೆಯೆಂದು ಹೇಳುತ್ತಾರೆ ಆ ರೀತಿ ಆಜ್ಞೆ ಇರಲಿಕ್ಕೆ ಇಲ್ಲ, ಆದರೆ ಆ ಅಧಿಕಾರಿಗಳು ಆ ರೀತಿ ಹೇಳುತ್ತಿದ್ದಾರೆ. ನಾವು ಹಳ್ಳಿಗೆ ಹೋದರೆ ಸ್ವಾಮಿ ನಮ್ಮ ಊರಿನ ಪಂಪ್ ಸೆಟ್ ಏನ ಯಿತು ? ಯಾವಾಗ ಬರುತ್ತದೆಂದು ನಮ್ಮನ್ನು ಕೇಳುತ್ತಾರೆ ನಾವು ಜನಗಳಿಗೆ ಏನು ಉತ್ತರ ಕೊಡಬೇಕು ? ಆದಕ್ಕಾಗಿ ನಾನು ತಮ್ಮಲ್ಲಿ ಪ್ರಾರ್ಥಿಸುತ್ತಿದ್ದೇನೆ ಜೋಡ್ ಕುರ್ಲೆ ಗ್ರಾಮಕ್ಕೆ ಎಷ್ಟು ದಿವಸಗಳಲ್ಲಿ ಹ್ಯಾಂಡ್ ಪಂಪ್‌ನ್ನು ಹಾಕಿಸಿ ಕೊಡುತ್ತೀರಿ ಎಂಬುದನ್ನು ?

ಶ್ರೀ ಕೆ. ಪ್ರಭಾಕರ್.—ಸರ್ಕಾರದ ಗಮನಕ್ಕೆ ತಂದಿದ್ದೀರಿ ಆದಷ್ಟು ಬೇಗ ಕೊಡಿಸಿ ಕೊಡುತ್ತೇವೆ.